**S.C. No.** 241/2023 ಪಿ.ಡಬ್ಲ್ಯೂ-2

**ಸಾಕ್ಷಿಯನ್ನು ದಿನಾಂಕ 22.1.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜೆ.ಎಂ ವಕೀಲರಿಂದಃ**

ನಮಗೆ ಗಂಡು ಮಕ್ಕಳಿಲ್ಲ ಎಂದರೆ ನಿಜ. ಒಟ್ಟು 3 ಜನ ಹೆಣ್ಣು ಮಕ್ಕಳು ಎಂದರೆ ನಿಜ. ನನ್ನ 3 ನೇ ಮಗಳು ಹತ್ತನೇ ತರಗತಿಗೆ ವಿದ್ಯಾಭ್ಯಾಸ ನಿಲ್ಲಿಸಿದ್ದರಿಂದ ಮತ್ತು ಆರೋಪಿಯ ತಾಯಿಗೆ ಉಷಾರಿಲ್ಲದ ಕಾರಣ ಮತ್ತು ಆರೋಪಿಯ ತಾಯಿ ನನ್ನ ಮೂರನೇ ಮಗಳನ್ನು ತುಂಬಾ ಇಷ್ಟಪಡುತ್ತಿದ್ದ ಕಾರಣ ಅವಳ ಮದುವೆಯನ್ನು ಬೇಗ ಮಾಡಿದೆವು. ಆರೋಪಿಯ ತಾಯಿ ನನ್ನ ತಾಯಿಯ ತಂಗಿ ಇರುತ್ತಾರೆ. ಆರೋಪಿ ಮತ್ತು ಅವರ ತಾಯಿ ನಮ್ಮ ಮನೆಗೆ ಆಗಾಗ ಬಂದು ಹೋಗುತ್ತಿದ್ದರು. ಹತ್ತನೇ ತರಗತಿ ಮುಗಿದ ಬಳಿಕ ನನ್ನ ಮಗಳು ಟೈಲರಿಂಗ್ ಕಲಿಯಲು ಹೋಗುತ್ತಿದ್ದಳು. ನಾವು ಮದುವೆ ಬ್ರೋಕರುಗಳಿಗೆ ನಮ್ಮ ಮಗಳ ಮದುವೆ ಮಾಡುವುದಾಗಿ ಹೇಳಿರಲಿಲ್ಲ. ನನ್ನ ಮಗಳು ಬೇರೆ ಹುಡುಗರ ಜೊತೆ ಸ್ನೇಹ ಮಾಡಿಕೊಂಡು ಪ್ರೀತಿ ಪ್ರೇಮ ಎಂದು ಓಡಾಡಿದ್ದರಿಂದ ಅವಳನ್ನು ಶಾಲೆಯಿಂದ ಬಿಡಿಸಿದೆವು ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ಅವಳಿಗೆ 18 ವರ್ಷ ವಯಸ್ಸಾಗಿತ್ತು. ಶಾಲೆ ಬಿಟ್ಟ ಎಷ್ಟು ವರ್ಷಕ್ಕೆ ಮದುವೆಯಾಯಿತು ಎಂದು ಗೊತ್ತಿಲ್ಲ. ಆ ಕಾಲಕ್ಕೆ ಆರೋಪಿಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ಗೊತ್ತಿಲ್ಲ. ನನ್ನ ದೊಡ್ಡ ಮಗಳ ಗಂಡ ಸ್ಥಿತಿವಂತರು ಎಂದರೆ ನಿಜ. ಆ ಕಾಲಕ್ಕೆ ಅವರಿಗೆ ಎರಡು ಮೆಡಿಕಲ್ ಶಾಪ್ ಇದ್ದವು ಎಂದರೆ ಮದುವೆಯ ಬಳಿಕ ಅವುಗಳನ್ನು ಮಾಡಿದ್ದಾರೆ. ನನ್ನ ಮೊದಲ ಅಳಿಯ ಮೆಡಿಕಲ್ ಡಿಸ್ಟ್ರಿಬ್ಯೂಟರ್ ಮಾಡುತ್ತಿದ್ದರು ಎಂದರೆ ನಿಜ. ನನ್ನ ಮೊದಲ ಅಳಿಯ ಸಹ ನಮ್ಮ ಹಳೆಯ ಸಂಬಂಧಿ ಅಂದರೆ ನನ್ನ ಗಂಡನ ತಂಗಿ ಮಗ ಇದ್ದಾರೆ.

ನನ್ನ ಮೊದಲ ಅಳಿಯ ಪಿ.ಯು.ಸಿ ಬಳಿಕ ನಮ್ಮ ಮನೆಯಲ್ಲಿದ್ದು ಓದುತ್ತಿದ್ದ. ಅವನು ಎಷ್ಟು ವರ್ಷ ನಮ್ಮ ಮನೆಯಲ್ಲಿದ್ದ ಎಂದು ಗೊತ್ತಿಲ್ಲ. ನನ್ನ ಚಿಕ್ಕಮ್ಮ ನನ್ನ ಮಗಳನ್ನು ತನ್ನ ಮಗನಿಗೆ ಮದುವೆ ಮಾಡಿಕೊಳ್ಳಲು ಇಷ್ಟಪಟ್ಟಿದ್ದರಿಂದ ಹಾಗೂ ಆರೋಪಿಯ ನಡವಳಿಕೆ ಚನ್ನಾಗಿದೆ ಎಂಬ ಕಾರಣಕ್ಕೆ ನನ್ನ ಮಗಳ ಮದುವೆಯನ್ನು ಆರೋಪಿಗೆ ಮಾಡಿದೆವು. ಆರೋಪಿ ಹಾಗೂ ನನ್ನ ಮಗಳು ಒಬ್ಬರಿಗೊಬ್ಬರು ಇಷ್ಟಪಡುತ್ತಿದ್ದರು. ಮಗುವಾಗುವವರೆಗೆ ಆರೋಪಿ ಹಾಗೂ ನನ್ನ ಮಗಳ ಚನ್ನಾಗಿದ್ದರು. ಆರೋಪಿಯು ಮದುವೆಗೆ ಮುಂಚೆ ಬೆಂಗಳೂರಿನ ಬೇಗೂರಿನಲ್ಲಿ ವಾಸವಿದ್ದರು. ಆಗಲೂ ಸಹ ಆರೋಪಿಯ ತಾಯಿ ನಮ್ಮ ಮನೆಗೆ ಬರುತ್ತಿದ್ದರು. ಮದುವೆ ಕಾಲಕ್ಕೆ ಆರೋಪಿ ಎನ್.ಆರ್.ಮೊಹಲ್ಲದಲ್ಲಿ ವಾಸವಿದ್ದರು. ಮದುವೆ ಕಾಲಕ್ಕೆ ನಾವು ಆರೋಪಿ ಮನೆಗೆ ಹೋಗಿರುತ್ತೇವೆ. ಮದುವೆಯಾದ ಬಳಿಕ 2 ವರ್ಷದವರೆಗೆ ಎನ್.ಆರ್.ಮೊಹಲ್ಲದಲ್ಲಿ ವಾಸವಿದ್ದರು. ಆ ಕಾಲಕ್ಕೆ ನಾನು ಹಲವು ಬಾರಿ ಆ ಮನೆಗೆ ಹೋಗಿರುತ್ತೇನೆ. ಆ ಕಾಲಕ್ಕೆ ಆರೋಪಿ ಮತ್ತು ನನ್ನ ಮಗಳು ಚನ್ನಾಗಿದ್ದರು. ಎನ್.ಆರ್.ಮೊಹಲ್ಲದಿಂದ ಭುಗತಹಳ್ಳಿಗೆ ಮನೆ ಬದಲಾಯಿಸಿದ್ದರು. ಭುಗತಹಳ್ಳಿಯಲ್ಲಿ 1 ವರ್ಷ ವಾಸವಿದ್ದರು. ಆ ಕಾಲಕ್ಕೆ ನಾನು 2–3 ಬಾರಿ ಆರೋಪಿ ಮನೆಗೆ ಹೋಗಿದ್ದೆ. ಆದರೆ ಆ ಮನೆಯ ವಿಳಾಸ ಗೊತ್ತಿಲ್ಲ. ಎನ್.ಆರ್.ಮೊಹಲ್ಲದ ಮನೆ ವಿಳಾಸ ಸಹ ಗೊತ್ತಿಲ್ಲ. ಭುಗತಹಳ್ಳಿಯಿಂದ ವರುಣ ಗ್ರಾಮದ ಮನೋಹರ್ ಎಂಬುವವರ ಮನೆಗೆ ಬಂದರು. ವರುಣದಲ್ಲಿ ಎಷ್ಟು ವರ್ಷ ವಾಸವಿದ್ದರು ಎಂದು ಗೊತ್ತಿಲ್ಲ. ಗರ್ಭಿಣಿಯಾದ ಬಳಿಕ ನನ್ನ ಮಗಳನ್ನು ನಮ್ಮ ಮನೆಗೆ ಕರೆದುಕೊಂಡ ಬಂದ ಬಗ್ಗೆ ಪೋಲಿಸರಿಗೆ ಹೇಳಿರುವ ಬಗ್ಗೆ ನೆನಪಿಲ್ಲ. ಪೋಲಿಸರ ಮುಂದೆ ಮದುವೆ ಬಳಿಕ ಲೋಕೇಶ ಆರಾಧ್ಯ, ಪಲ್ಲವಿ ಮತ್ತು ಗೌರಮ್ಮನವರು ಎನ್.ಆರ್ ಮೊಹಲ್ಲದ ಕರುಣಾಪುರ, ಜೆ.ಪಿ.ನಗರ, ಭುಗತಹಳ್ಳಿ, ಮಹದೇವಪುರ ಹಾಗೂ ವರುಣದಲ್ಲಿ ಬಾಡಿಗೆಗೆ ವಾಸವಿದ್ದರು ಎಂದು ಹೇಳಿಕೆ ನೀಡಿಲ್ಲ. ಸದರಿ ಹೇಳಿಕೆಯನ್ನು ನಿಡಿ1 ಎಂದು ಗುರುತಿಸಿದೆ. ಮದುವೆಯಾದ

ಎರಡು ವರ್ಷದ ಬಳಿಕ ಪಲ್ಲವಿ ಗರ್ಭಿಣಿಯಾದರು. ಗರ್ಭಿಣಿಯಾದಾಗ ಅವರು ಭುಗತಹಳ್ಳಿಯ ಮನೆಯಲ್ಲಿ ವಾಸವಿದ್ದರು. ಗರ್ಭಿಣಿಯಾದ 2 ತಿಂಗಳ ಬಳಿಕ ನನ್ನ ಮಗಳು ನಮ್ಮ ಮನೆಗೆ ಬಂದರು. ಗರ್ಭಿಣಿಯಾಗಿದ್ದಾಗ ಆರೋಪಿ ನನ್ನ ಮಗಳ ಜೊತೆ ಚನ್ನಾಗಿದ್ದ. ಡೆಲಿವರಿಯಾಗುವವರೆಗೆ ನನ್ನ ಮಗಳು ನಮ್ಮ ಮನೆಯಲ್ಲಿದ್ದಳು. ಆ ಕಾಲಕ್ಕೆ ನನ್ನ ಮಗಳಿಗೆ ಸೀಮಂತ ಮಾಡಿರಲಿಲ್ಲ. ನಂತರ ವರುಣ ಗ್ರಾಮದ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಡೆಲಿವರಿಯಾಗಿ 1 ವರ್ಷದವರೆಗೆ ಪಲ್ಲವಿ ನಮ್ಮ ಮನೆಯಲ್ಲಿದ್ದಳು. 1 ವರ್ಷದ ಬಳಿಕ ಆರೋಪಿಯ ಮನೆಗೆ ಹೋದ ನಂತರ ಆರೋಪಿ ದುಡ್ಡು ಕಾಸು ತೆಗೆದುಕೊಂಡು ಬಾ ಎಂದು ಹೇಳುತ್ತಿದ್ದ. ಮನೆ ಕಟ್ಟಲು ಪ್ರಾರಂಭಿಸಿದಾಗ ಆರೋಪಿ ಆ ರೀತಿ ಹಣ ಕೇಳಲು ಪ್ರಾರಂಭಿಸಿದ. ಆ ಕಾಲಕ್ಕೆ ನಾವು ದೂರು ನೀಡಿರುವುದಿಲ್ಲ. ಸೈಟನ್ನು ಆರೋಪಿ ಮದುವೆಗೆ ಮುಂಚೆ ಖರೀದಿಸಿದ್ದ. ಆ ಕಾಲಕ್ಕೆ ನಾವೇ ಆ ಸೈಟ್ ಖರೀದಿ ಮಾಡಲು ಸಹಕರಿಸಿದ್ದೆವು, ಆದರೆ ಹಣವನ್ನು ಆರೋಪಿಯೇ ನೀಡಿದ್ದ.

ಈ ವೇಳೆಗೆ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮತ್ತು ಆರೋಪಿ ಪರ ವಕೀಲರು ನಾಳೆ ಬೇರೆ ಪ್ರಕರಣಗಳಲ್ಲಿ ತೊಡಗಿಸುಕೊಳ್ಳುವ ಅವಶ್ಯಕತೆ ಇರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು